**ಸಿಸಿ ನಂಬರ್ಃ 669/2018**

**ಡಿಡಬ್ಲ್ಯೂಃ 01**

ದಿನಾಂಕಃ 12-01-2023 ರಂದು ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎಮ್.ವಿ.ಜಿ ವಕೀಲರಿಂದಃ**

ನಾನು ಮತ್ತು ಪ್ರಕರಣದ ಪಿರ್ಯಾದಿ ಒಂದೇ ಗ್ರಾಮದವರು ಅಂದರೆ ಸರಿ. ನಾನು ಮತ್ತು ಪ್ರಕರಣದ ಪಿರ್ಯಾದಿ ಗೆಳೆಯರು ಅಂದರೆ ಸರಿ. ನಮ್ಮ ಮಧ್ಯ ಮೊದಲಿನಿಂದಲೂ ಒಳ್ಳೆಯ ಪರಿಚಯ ಇದೆ ಅಂದರೆ ಸರಿ. ನಾವು ಪರಿಚಯಸ್ಥರು ಇರುವುದರಿಂದ ಒಬ್ಬರಿಗೊಬ್ಬರು ಸಹಾಯ ಮಾಡುವ ಮನೋಭಾವ ಹೊಂದಿರುತ್ತೇವೆ ಅಂದರೆ ಸರಿ. ಸಾಮಾನ್ಯವಾಗಿ ಗೆಳೆಯರು ಇದ್ದಾಗ ಹಣ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರ ಮಾಡುತ್ತಾರೆ ಅಂದರೆ ಸರಿ.

2. ನಾನು ಮತ್ತು ನನ್ನ ಹೆಂಡತಿ ಶಿಕ್ಷಕರು ಎಂದು ಕೆಲಸ ಮಾಡುತ್ತೇವೆ ಅಂದರೆ ಸರಿ. ಪಿರ್ಯಾದಿ ಶಿಕ್ಷಕ ಅಂತ ಕೆಲಸ ಮಾಡುತ್ತಾನೆ ಅಂದರೆ ಸರಿ. ನಾನು ಯಾದಗಿರಿ ಜಿಲ್ಲೆಯ ಮಗದಾನಪೂರು ತಾಂಡದಲ್ಲಿ ಶಿಕ್ಷಕ ಎಂದು ಕೆಲಸ ಮಾಡುತ್ತಿದ್ದೆ ಅಂದರೆ ಸರಿ. ಪಿರ್ಯಾದಿ ಮಸ್ಕಿ ತಾಲೂಕಿನ ಯದ್ದಲದಿನ್ನಿ ಕ್ಯಾಂಪಿನಿನಲ್ಲಿ ಶಿಕ್ಷಕ ಎಂದು ಕೆಲಸ ಮಾಡುತ್ತಾ ವಾಸ ಇದ್ದ ಅಂದರೆ ಸರಿ. ನಂತರ ಪಿರ್ಯಾದಿ ಸಿರವಾರ ತಾಲೂಕಿನ ಕಲ್ಲೂರಿನಲ್ಲಿ ಕೆಲಸ ಮಾಡುತ್ತಾ ಇದ್ದ, ಸಿರವಾರದಲ್ಲಿ ಮನೆ ಮಾಡಿ ವಾಸ ಇದ್ದ ಅಂದರೆ ಸರಿ. ಸಿರವಾರದಿಂದ ಯಾದಗಿರಿ ಸುಮಾರು 80 ಕಿ.ಮಿ ದೂರದಲ್ಲಿ ಇದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 250 ಕಿ.ಮಿ ದೂರ ಇದೆ ಎಂದು ಹೇಳುತ್ತಾರೆ. ಸಿರವಾರದಿಂದ ರಾಯಚೂರು 35 ಕಿ.ಮಿ ದೂರ ಇದೆ. ರಾಯಚೂರಿನಿಂದ ಯಾದಗಿರಿ ಸುಮಾರು 43 ಕಿ.ಮಿ ದೂರದಲ್ಲಿ ಇದೆ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಗೆಳೆಯರು ಒಬ್ಬರಿಗೊಬ್ಬರು ಹಣದ ಸಹಾಯ ಮಾಡಿದಾಗ ಅದಕ್ಕೆ ಬಡ್ಡಿ ಪಡೆಯುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

3. ದಿನಾಂಕ 30.11.2015 ರಂದು ನಾನು ಮತ್ತು ಪಿರ್ಯಾದಿ ಸೇರಿ ಎರಡು ಛಾಪಕಾಗದಗಳನ್ನು ಖರೀದಿ ಮಾಡಿದ್ದೆವು ಅಂದರೆ ಸರಿಯಲ್ಲ. ಸದರಿ ಛಾಪಕಾಗದಗಳಲ್ಲಿ 1 ನೇ ಪಕ್ಷಗಾರ ನಾನು ಮತ್ತು 2 ನೇ ಪಕ್ಷಗಾರ ಪಿರ್ಯಾದಿ ಹೆಸರು ತೋರಿಸಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.7 ಮತ್ತು 8 ರ ದಾಖಲೆ ತೋರಿಸಿ 1 ನೇ ಪಕ್ಷಗಾರನ ಹೆಸರು ದ್ಯಾಮಣ್ಣ ತಂದೆ ತಿಪ್ಪಣ ಮೇಟಿ, ಸಾಃಯಾದಗಿರಿ, 2 ನೇ ಪಕ್ಷಗಾರನ ಹೆಸರು ಲಿಂಗಯ್ಯ ತಂದೆ ಸೋಮಯ್ಯ ಹಿರೇಮಠ ಸಾಃಮಸ್ಕಿ ಹಾಗೂ ಸದರಿ ಎರಡು ಛಾಪಕಾಗದಗಳನ್ನು ಯಾದಗಿರಿಯಲ್ಲಿ ಪಡೆದ ಛಾಪಕಾಗದಗಳು ಅಂದರೆ ಸರಿ. ನಿಪಿ.7 ಮತ್ತು 8 ರ ದಾಖಲೆಗಳನ್ನು ನಾನೇ ಖರೀದಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.7

ಮತ್ತು 8 ರಲ್ಲಿ ಇರುವ ಸಹಿಗಳು ನನ್ನ ಸಹಿ ಅಂದರೆ ಸರಿಯಲ್ಲ. ಸಾಕ್ಷಿಗೆ ಮುಖ್ಯವಿಚಾರಣೆ ತೋರಿಸಿ ಅದರಲ್ಲಿರುವ ಸಹಿ ನನ್ನದೆ ಅಂತ ಹೇಳಿರುತ್ತಾರೆ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಹಿ ಹಾಗೂ ನಿಪಿ.7 ಮತ್ತು 8 ರಲ್ಲಿರುವ ಸಹಿಗಳು ಒಂದೇ ಆಗಿರುತ್ತವೆ ಅಂದರೆ ಸರಿಯಲ್ಲ. ದಿನಾಂಕ 30.01.2016 ರಂದು ನಾನೇ ನಿಪಿ.8 ರಂತೆ ದಾಖಲೆಯನ್ನು ಯಾದಗಿರಿಯಲ್ಲಿ ಖರೀದಿಸಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.8 ರಲ್ಲಿ ನನ್ನ ಸಹಿ ಇದೆ ಅಂದರೆ ಸರಿಯಲ್ಲ. ನಿಪಿ.7 ಮತ್ತು 8 ರಲ್ಲಿ ನನ್ನ ಸಹಿಗಳು ಇದ್ದರು ಅವು ನನ್ನ ಸಹಿಗಳು ಅಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.7 ಮತ್ತು 8 ರಂತೆ ಕೈಗಡ ಸಾಲದಪತ್ರಗಳನ್ನು ಬರೆದುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.7 ಮತ್ತು 8 ನ್ನು ಬರೆದುಕೊಟ್ಟಾಗ ನಾಗಲಿಂಗಯ್ಯ ಮತ್ತು ವಿಶ್ವನಾಥ ಎಂಬ ಸಾಕ್ಷಿದಾರರು ಇದ್ದರು ಅವರು ಅದಕ್ಕೆ ಸಹಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ.7 ಮತ್ತು 8 ರ ದಾಖಲೆಗಳನ್ನು ನಾನು ಪಿರ್ಯಾದಿಗೆ ರೂ.7 ವರೆ ಲಕ್ಷ ಕೊಡುವುದು ಬಾಕಿ ಇದೆ ಎಂದು ಒಪ್ಪಿ ಬರೆದುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. 2017 ನೇ ಸಾಲಿನಲ್ಲಿ ಪಿರ್ಯಾದಿ ಸಿರವಾರದಲ್ಲಿ ವಾಸ ಇದ್ದ ಅಂದರೆ ಸರಿ. ಪಿರ್ಯಾದಿಯ ಹೆಂಡತಿ ಶಿಕ್ಷಕಿ ಎಂದು ಕೆಲಸ ಮಾಡುತ್ತಾರೆ ಅಂದರೆ ಸರಿ. ಪಿರ್ಯಾದಿ ಮತ್ತು ಆತನ ಹೆಂಡತಿಗೆ ತಿಂಗಳಿಗೆ ತಲಾ 35 ರಿಂದ 40 ಸಾವಿರ ಸಂಬಳ ಇದೆ ಅಂದರೆ ಸರಿ.

4. ನಿಪಿ.1 ರ ಚೆಕ ನನ್ನ ಖಾತೆಗೆ ಸೇರಿದ ಚೆಕ್ ಅಂದರೆ ಸರಿ. ನಿಪಿ.1(ಎ) ರ ಸಹಿ ನನ್ನದು ಅಂದರೆ ಸರಿ. ನಿಪಿ.1 ರ ಚೆಕನ್ನು ರೂ.7,50,000/- ಹಣದ ಮರುಪಾವತಿಗಾಗಿ ದಿನಾಂಕ 27.10.2017 ರಂದು ಪಿರ್ಯಾದಿಗೆ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.1 ರ ಚೆಕನ್ನು ನಾನು ಹಣದ ಮರುಪಾವತಿಗಾಗಿ ಪಿರ್ಯಾದಿಗೆ ನಾನೇ ಬರೆದುಕೊಟ್ಟಿದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2017 ನೇ ಸಾಲಿನಲ್ಲಿ ನಾನು ಯಾದಗಿರಿ ಜಿಲ್ಲೆಯ ಮುಗದಾಂಪೂರು ತಾಂಡದ ಶಾಲೆಯ ಮುಖ್ಯೋಪಾದ್ಯಯ ಎಂದು ಕೆಲಸ ಮಾಡುತ್ತಿದ್ದೆ ಅಂದರೆ ಸರಿ. ನಾನು ಪಿರ್ಯಾದಿಗೆ 7 ಲಕ್ಷ 50 ಸಾವಿರ ಕೊಡುವುದಾಗಿ ಬಾಕಿ ಇತ್ತು ಅದರ ಮರುಪಾವತಿಗಾಗಿ ನಿಪಿ.1 ರ ಚೆಕನ್ನು ಪಿರ್ಯಾದಿಗೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ನಾನು ನೀಡಿದ ಚೆಕ ಪಿರ್ಯಾದಿ ದಿನಾಂಕ 30.10.2017 ರಂದು ತನ್ನ ಖಾತೆಗೆ ಜಮೆಗೆ ಹಾಕಿಕೊಂಡಿದ್ದ ಅಂದರೆ ನನಗೆ ಗೊತ್ತಿಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕಿನವರು ದಿನಾಂಕ 10.11.2017 ರಂದು ಹಿಂಬರಹ ನೀಡಿರುತ್ತಾರೆ ಅಂದರೆ ಸರಿಯಲ್ಲ. ತದನಂತರ ಪಿರ್ಯಾದಿಯ ಪರವಾಗಿ ತನ್ನ ವಕೀಲರ ಮೂಲಕ ನಿಪಿ.4 ರಂತೆ ನೋಟಿಸ್ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ದಿನಾಂಕ 19.12.2017 ರಂದು ಸದರಿ ನೋಟಿಸ್ ನನಗೆ ಮುಟ್ಟಿರುತ್ತದೆ ಅಂದರೆ ಸರಿಯಲ್ಲ. ಪಿರ್ಯಾದಿ ನೀಡಿದ ನೋಟಿಸಿಗೆ ನಾನು ಉತ್ತರ ನೀಡಿಲ್ಲ ಅಂದರೆ ಸಾಕ್ಷಿ ನನಗೆ ನೋಟಿಸ್ ಮುಟ್ಟಿಲ್ಲ ಕಾರಣ ಉತ್ತರ ನೀಡಿಲ್ಲ ಅಂತ ಹೇಳುತ್ತಾರೆ. ದಿನಾಂಕ 19.12.2017 ರಂದು ಪಿರ್ಯಾದಿ ನೀಡಿದ ನೋಟಿಸ್ ಯಾದಗಿರಿ ಜಿಲ್ಲೆಯ ಮುಗದಂಪೂರು ತಾಂಡದ ಶಾಲೆಯಲ್ಲಿ ಕೆಲಸದಲ್ಲಿ ಇದ್ದಾಗ ನನಗೆ ಮುಟ್ಟಿರುತ್ತದೆ ಆದರೆ ಸ್ವೀಕೃತಿ ಪತ್ರಕ್ಕೆ ನಾನು ಸಹಿ ಬೇರೆ ಮಾಡಿರುತ್ತೇನೆ ಅಂದರೆ ಸರಿಯಲ್ಲ

ಈ ಎಲ್ಲ ಮಾಹಿತಿ ನನಗೆ ಇದ್ದರು ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಶ್ರೀ ಎಮ್.ವಿ.ಜಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು ಮುಂದುಡಲಾಯಿತು.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾ.ದಂ.ಗಳು,ಮಾನ್ವಿ**